# ಶಾಸಕನಿಗೆ ಕಪಾಳಮೋಕ್ಷ, ಕಿರುತೆರೆ ನಟಿಯ ಭೀಕರ ಕೊಲೆ

ಇಡೀ ರಾತ್ರಿ ಸುರಿದು ಬರಿದಾದ ಮಳೆ ಮೋಡಗಳು, ಇನ್ನು ನಿನ್ನ ಪಾಳಿ ಎಂಬಂತೆ ನೀಲ ಶುಭ್ರ ಆಕಾಶವನ್ನು ಸೂರ್ಯನಿಗೆ ಒಪ್ಪಿಸಿತ್ತು. ತನ್ನ ಸರದಿಗೆ ಕಾದಿದ್ದು, ರೊಚ್ಚಿಗೆ ಬಿದ್ದ ಸೂರ್ಯ ಬೆಳಿಗ್ಗೆ ಒಂಬತ್ತಕ್ಕೇ ನಿಗಿ ನಿಗಿ ಕೆಂಡವಾಗಿದ್ದ. ಎಂದಿನಂತೆ ಒಂದು ನಿಮಿಷವೂ ಅತ್ತಿತ್ತ ಆಗದಂತೆ ಒಂಬತ್ತಕ್ಕೆ ಸರಿಯಾಗಿ ಜಗ ಜನನಿ ನಗರದ ಪೊಲೀಸ್ ಠಾಣೆಯ ಅಂಗಳಕ್ಕೆ, ಹೊಸ ಸಬ್ ಇನ್ಸ್‌ಪೆಕ್ಟರ್ ಮಾಯಣ್ಣನ ಜೀಪ್ ಬಂದಿತ್ತು. ಬೆಂಗಳೂರಿನ ಹೊರವಲಯದಲ್ಲಿನ ಜೆ.ಜೆ. ನಗರ, ಬಹುತೇಕ ಜನವಿರಳ ಪ್ರದೇಶವಾಗಿದ್ದು, ಅಲ್ಲಿ ಸಾಕಷ್ಟು, ಒಂಟಿಮನೆ ದರೋಡೆ, ದಾರಿ ಸುಲಿಗೆ, ಕೊಲೆ, ಸರಗಳ್ಳತನಗಳು ಅವ್ಯಾಹತವಾಗಿ ನಡೆಯುತ್ತಿತ್ತು.

ಈ ಸ್ಟೇಷನ್ನಿಗೆ ಒಬ್ಬ ದಿಟ್ಟ ಅಧಿಕಾರಿಯ ಅವಶ್ಯಕತೆಯ ಮನಗಂಡು, ಮಾಯಣ್ಣನನ್ನು ಮೂರು ವಾರದ ಕೆಳಗಷ್ಟೇ ಇಲ್ಲಿಗೆ ಪೋಸ್ಟ್ ಮಾಡಲಾಗಿತ್ತು. ಮೂವತ್ತರ ಆಸುಪಾಸಿನ ಮಾಯಣ್ಣನದು ಆಕರ್ಷಕ ವ್ಯಕ್ತಿತ್ವ. ಅವನ ಆ ದುಂಡು ಮುಖ, ನೀಳ ಮೂಗಿನಡಿಯ ಪೊದೆ ಮೀಸೆ, ತುಟಿಯಂಚಲಿ ಸದಾ ತೇಲುವ ನಸುನಗೆಯ ಆಕರ್ಷಣೆಗೆ ಸೋತ ಹುಡುಗಿಯರು ಅದೆಷ್ಟೋ. ಅರೆಮಲೆನಾಡಿನ ಸ್ಥಾನಿಕನಾದ ಮಾಯಣ್ಣ ಎಂಎ ಡಿಗ್ರಿ ಪಾಸಾದ ನಂತರ ಮೊದಲಿಗೆ ಕಾಲೇಜು ಉಪನ್ಯಾಸಕನಾಗ ಬಯಸಿದ್ದರೂ ಕೊನೆಗೆ ಸೇರಿದ್ದು ಪೊಲೀಸು ಇಲಾಖೆಯನ್ನೇ.

ಅಕಸ್ಮಾತ್ ಯೂನಿಫಾರ್ಮ್‌ನಲ್ಲಿ ಇರದಿದ್ದರೂ ಆತ ಒಬ್ಬ ಖಡಕ್ ಪೊಲೀಸ್ ಅಧಿಕಾರಿ ಎಂದು ಯಾರು ಬೇಕಾದರೂ ಗುರುತಿಸಬಹುದಾದಂತಹ ಅರೆಬೋಡು ಕ್ರಾಪು, ಎತ್ತರದ ನೇರ ನಿಲುವು, ಸದೃಢ ಮೈಕಟ್ಟು, ಗಂಭೀರ ಚರ್ಯೆ... ಸಾಮಾನ್ಯವಾಗಿ ಎಲ್ಲಾ ಪೊಲೀಸರಂತೆ ಕೆದಕಿ ಬೆದಕಿ ನೋಡುವಂಥ ಶೋಧಕ ದೃಷ್ಟಿ.

ಶಿಸ್ತು, ಕಾನೂನುಗಳ ಚೌಕಟ್ಟಿಗೆ ಕಟ್ಟುಬಿದ್ದ ಮಾಯಣ್ಣ ತನ್ನ ಪ್ರಾಮಾಣಿಕತೆ ಮತ್ತು ನಿಷ್ಠುರತೆಯಿಂದ ಯಾರಿಗೂ ಬೇಡವಾದ ಕೂಸಾಗಿದ್ದ. ತಮ್ಮ ಮೇಲಧಿಕಾರಿಯ ಈ ಪ್ರಾಮಾಣಿಕತೆಯ ವ್ಯಸನದಿಂದ ಒಂದಷ್ಟು ಕೆಳಗಿನವರಿಗೆ ಕಿರಿಕಿರಿಯಾಗಿದ್ದರೂ, ತಂತಾವೇ ಸಾಕಷ್ಟು ಸುಧಾರಿಸಿಕೊಂಡಿದ್ದರು.

‘ಸಾರ್ ಕಾಫಿ...’

ಟೇಬಲ್ ಮೇಲೆ ಬೆಳಗಿನ ಕಾಫಿ ತಂದಿಟ್ಟ ಹೊಸ ಪಿ.ಸಿ. ಭುಜಂಗ. ರಾಮನಿಗೆ, ಲಕ್ಷ್ಮಣ–ಹನುಮಂತ ಹೇಗೋ ಹಾಗೆ, ಈ ಭುಜಂಗ ಆ ಎರಡೂ ಆಗಿದ್ದ ಮಾಯಣ್ಣನಿಗೆ. ಮಾಯಣ್ಣನ ಬಗ್ಗೆ ಅವನ ಗೌರವ, ನಿಷ್ಠೆ ಪಾರವಿಲ್ಲದ್ದು.

ಅದೊಂದು ಘಟನೆಯ ಮೂಲಕ ಜೆ.ಜೆ. ನಗರದ ಸ್ಟೇಷನ್ನಿನ ಸಿಬ್ಬಂದಿಗೆ, ಮಾಯಣ್ಣ ಡ್ಯೂಟಿಗೆ ರಿಪೋರ್ಟ್ ಆದ ಮೊದಲ ವಾರವೇ, ಆತನ ವ್ಯಕ್ತಿತ್ವದ ಸ್ಪಷ್ಟ ಚಿತ್ರಣ ಸಿಕ್ಕಿತ್ತು.

ಬೆಳಿಗ್ಗೆ ಸುಮಾರು 8.45 ಇರಬಹುದೇನೋ, ಏರಿಯಾ ಎಂಎಲ್ಎ ಸಿದ್ದಪ್ಪ ಕುದಿಯುತ್ತಾ ಕೂಗಾಡುತ್ತಾ ತಮ್ಮ ಏಳೆಂಟು ಬೆಂಬಲಿಗರೊಂದಿಗೆ ಸ್ಟೇಷನ್ನಿಗೆ ದಾಂಗುಡಿಯಿಟ್ಟಿದ್ದರು. ಅಂದು ಅದೇ ಬೆಳಿಗ್ಗೆ ಜಿಲ್ಲೆಯ ಪೊಲೀಸ್ ವರಿಷ್ಠ ಅಧಿಕಾರಿಯಾದ ಎಸ್ಪಿ ಸಾಹೇಬರು ಕೂಡ ಠಾಣೆ ಪರಿಶೀಲನೆಗಾಗಿ ದಿಢೀರ್ ಬಂದಿದ್ದರು. ಸಿದ್ದಪ್ಪ, ಎಂಪಿನೂ ಅಲ್ಲ, ಮಂತ್ರಿನೂ ಅಲ್ಲ, ಬರೀ ಎಂಎಲ್ಎ ಅಷ್ಟೇ. ಆದರೆ ಕ್ಷೇತ್ರದಲ್ಲೇ ಏನು, ಇಡೀ ಜಿಲ್ಲೆಯ ಒಬ್ಬ ಪ್ರಭಾವಿ ರಾಜಕಾರಣಿ. ನಯ ನಾಜೂಕಿನ ಗಂಧಗಾಳಿಯೂ ಇಲ್ಲದ ಈತ ಪಕ್ಷ ಮತ್ತು ಪಕ್ಷದ ನಾಯಕರನ್ನು ಪ್ರತಿದಿನ

